**ಮೂಲ ದಾವಾ ನಂಃ 6/2025**

**ಪಿ. ಡಬ್ಲ್ಯು 1**

**(ಇಂದು ದಿನಾಂಕಃ 06-02-2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದಃ</u>**

ಸಾಕ್ಷಿಯು ತನಗೆ ಸರಿಯಾಗಿ ಕನ್ನಡ ಬರುವುದಿಲ್ಲ ಎಂದು ತಿಳಿಸಿದ್ದು ಈ ಕಾರಣಕ್ಕಾಗಿ **ಶ್ರೀ ಕೀರ್ತಿರಾಜ್** ವಕೀಲರನ್ನು ಭಾಷಾ ತರ್ಜುಮೆಗಾರರನ್ನಾಗಿ ನೇಮಕಮಾಡಿಕೊಂಡು ಭಾಷಾಂತರಕಾರಕರಾಗಿ ಪ್ರಮಾಣವಚನ ಬೋಧಿಸಲಾಯಿತು.

ಈ ದಾವೆಯನ್ನು ದಿನಾಂಕ 16-11-2023 ರಂದು ಆಗಿದೆ ಎನ್ನಲಾದ ಕ್ರಯದ ಕರಾರು ಪತ್ರದ ಆಧಾರದ ಮೇಲೆ ಡಿಕ್ರಿ ಮಾಡಬೇಕೆಂದು ಕೋರಿ ಈ ದಾವೆಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಷದ್ರಿ ಕರಾರು ನೊಂದಣಿ ಆಗಿಲ್ಲ ಎಂದರೆ ಸರಿ. ನೀವು ಆಧರಿಸುವ ಕ್ರಯದ ಕರಾರು ಪತ್ರವು ಕಾನೂನು ಬದ್ದವಾಗಿಲ್ಲ ಎಂದರೆ ಸರಿಯಲ್ಲ. ಷದ್ರಿ ಕರಾರಿಗೆ ಯಾವುದೇ ಕಾನೂನಿನ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಹಾಜರುಪಡಿಸಿರುವ ಕರಾರು ನಿಪಿ-1 ಅಲ್ಲವೇ ಎಂದರೆ ಸಾಕ್ಷಿ ಹೌದು ಅದು ನಿಪಿ-1 ಅಂತಾ ಉತ್ತರಿಸುತ್ತಾರೆ.ನಿಪಿ-1ರ ಕರಾರಿನಲ್ಲಿ ಪ್ರತಿವಾದಿಯ ವಿಳಾಸವನ್ನು ತಪ್ಪು ಹಾಗೂ ಸುಳ್ಳಾಗಿ ತೋರಿಸಿದ್ದೀರಿ ಎಂದರೆ ಸರಿಯಲ್ಲ. ನನ್ನ ಪ್ರಕಾರ ನಿಪಿ-1ರ ಕರಾರಿನಲ್ಲಿ ಬರೆದ ವಿಷಯಗಳು ಸರಿಯಾಗಿದೆ. ನೀವು ನಿಪಿ-1ರ ಕರಾರಿಗೆ ಬದ್ದರಿದ್ದೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ನಿಪಿ-1ರ ಕರಾರಿನ 2 ನೇ ಪುಟದ 5 ನೇ ಷರತ್ತಿನಲ್ಲಿ ಬರೆದಿರುವ ವಿಷಯ ಒಂದು ವೇಳೆ ಕರಾರಿನ 3 ತಿಂಗಳ ಒಳಗಾಗಿ ನೊಂದಾಯಿತ ಕ್ರಯ ಪತ್ರ ಮಾಡಿಕೊಡಲು ಆಗದೇ ಇದ್ದಲ್ಲಿ ಮುಂಗಡ ಹಣದ ಪೈಕಿ ಶೇಕಡಾ 50 ರಷ್ಟು ಹಣವನ್ನು ವಾಪಾಸು ಕೊಡುವಂತೆ ಉಲ್ಲೇಖಿಸಲಾಗಿದೆ ಎಂದರೆ ಸರಿ. ಷದ್ರಿ ಕರಾರಿನ ಪ್ರಕಾರ ಕರಾರಿನ ಅವಧಿಯು ದಿನಾಂಕ 16-02-2024 ರಂದು ಮುಗಿದಿರುತ್ತದೆ ಎಂದರೆ ಸರಿ. ನಿಪಿ-1ರ ಕರಾರನ್ನು ಹೊರತುಪಡಿಸಿ ಬೇರೆ ಯಾವುದಾದರೂ ಕರಾರನ್ನು ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ಕರಾರಿನ 3 ತಿಂಗಳ ಅವಧಿಯ ಒಳಗಾಗಿ ಕರಾರಿನಲ್ಲಿ ಉಲ್ಲೇಖಿಸಿರುವಂತೆ ಬಾಕಿ ಪ್ರತಿಫಲದ ಹಣ ರೂ.34,70,000/-ವನ್ನು ಪ್ರತಿವಾದಿಗೆ ಸಂದಾಯ ಮಾಡಿರುತ್ತೀರಾ ಎಂದರೆ ಸಾಕ್ಷಿ ಕ್ರಯ ಪತ್ರ ನೊಂದಣಿ ಮಾಡಿಕೊಡದ ಕಾರಣ ಸಂದಾಯ ಮಾಡಿಲ್ಲ

ಅಂತಾ ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ದಾವಾ ಆಸ್ತಿಗೆ ಸಂಬಂಧಿಸಿದಂತೆ ಈ–ಸ್ವತ್ತು ಆಗಿರಲಿಲ್ಲ ಅಂತಾ ಉತ್ತರಿಸುತ್ತಾರೆ. ಸದ್ರಿ ಕರಾರಿನ ಅವಧಿಯ ಒಳಗಾಗಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಈ–ಸ್ವತ್ತು ಇರಲಿಲ್ಲ ಎಂಬ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಅಂತಾ ಉತ್ತರಿಸುತ್ತಾರೆ. ಸದ್ರಿ ಕರಾರಿನಲ್ಲಿ ನಿಗದಿಪಡಿಸಿದ 3 ತಿಂಗಳ ಅವಧಿಯ ಒಳಗಾಗಿ ಪ್ರತಿವಾದಿಗೆ ಬಾಕಿ ಪ್ರತಿಫಲದ ಹಣವನ್ನು ಕೊಡಲು ಪ್ರಯತ್ನಿಸಿದ್ದಾಗಲೀ ಅಥವಾ ಕ್ರಯದ ಕರಾರು ಪತ್ರದ ಷರತ್ತಿನ ಪ್ರಕಾರ ಕ್ರಯ ಪತ್ರವನ್ನು ನೊಂದಣಿ ಮಾಡಿಸಿಕೊಳ್ಳಲು ಪ್ರಯತ್ನ ಮಾಡಿದ ಬಗ್ಗೆ ಯಾವುದಾದರು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ನಾನು ತಯಾರಿದ್ದೇನೆ ಆದರೆ ದಾವಾ ಆಸ್ತಿಯ ಈ–ಸ್ವತ್ತು ಸಿದ್ದವಿರಲಿಲ್ಲ ಅಂತಾ ಉತ್ತರಿಸುತ್ತಾರೆ. ಆ ಬಗ್ಗೆ ನೀವು ಏನಾದರೂ ಪ್ರಯತ್ನ ಮಾಡಿದ್ದು ಇದೆಯಾ ಎಂದರೆ ಸಾಕ್ಷಿ ಪ್ರಯತ್ನಿಸಿದ್ದೆ ಅಂತಾ ಉತ್ತರಿಸುತ್ತಾರೆ. ನೀವು ಆ ರೀತಿ ಪ್ರಯತ್ನಿಸಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕ್ರಯ ಪತ್ರ ಮಾಡಿಸಿಕೊಳ್ಳಲು ಪ್ರತಿವಾದಿಯನ್ನು ಭೇಟಿ ಮಾಡಿದ್ದೆ ಹಾಗೂ ಆ ಬಗ್ಗೆ ಲಿಖಿತ ರೂಪದಲ್ಲಿ ತಿಳುವಳಿಕೆ ನೀಡಿದ್ದೆ ಹಾಗೂ ವೈಯಕ್ತಿಕ ಸಭೆ ನಡೆಸಿರುವ ಬಗ್ಗೆ ಹೇಳಿದ್ದು ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಅಂತಾ ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ಆ ಬಗ್ಗೆ ನಮ್ಮ ನಡುವೆ ಮಾತುಕತೆ ಆಗಿತ್ತು ಅಂತಾ ಉತ್ತರಿಸುತ್ತಾರೆ. ಆ ರೀತಿ ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯ ಸುಳ್ಳು ಎಂದರೆ ಸರಿಯಲ್ಲ.

3. ಪ್ರತಿವಾದಿ ದಾವಾ ಆಸ್ತಿಯ ಕುರಿತು ಬೇರೆಯವರೊಂದಿಗೆ ಅಗ್ರಿಮೆಂಟು ಹಾಗೂ ಜಿ.ಪಿ.ಎ ವಗೈರೆ ಮಾಡಿಕೊಟ್ಟ ಬಗ್ಗೆ ಏನಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಈ ಹಂತದಲ್ಲಿ ಸಾಕ್ಷಿ ಅವರು ಹಾಜರುಪಡಿಸಿರುವ ದಾಖಲೆಗಳನ್ನೆಲ್ಲಾ ತೋರಿಸಿ ಅವುಗಳಲ್ಲಿ ನೀವು ಹೇಳುವ ಅಂತಹ ದಾಖಲೆಗಳು ಇವೆಯಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ನೀವು ನಿಪಿ–1ರ ಕರಾರಿನ ಷರತ್ತನ್ನು ಪರಿಪಾಲನೆ ಮಾಡದೇ ನಿಮ್ಮ ತಪ್ಪನ್ನು ಮುಚ್ಚಿಕೊಳ್ಳುವ ಸಲುವಾಗಿ ದಾವಾ ಆಸ್ತಿಗೆ ಆ ಸಮಯದಲ್ಲಿ ಈ–ಸ್ವತ್ತು ಇರಲಿಲ್ಲ ಅಂತಾ ಮತ್ತು ಪ್ರತಿವಾದಿ ರಮೇಶ್ ನಾಗೇಶ್ ದುಬಾಷಿ

ಎಂಬವರಿಗೆ ಜಿ.ಪಿ.ಎ ಮತ್ತು ಕ್ರಯದ ಕರಾರುಪತ್ರ ಮಾಡಿಕೊಟ್ಟಿರುತ್ತಾರೆ ಹಾಗೂ ಅವುಗಳನ್ನು ಮುಚ್ಚಿಟ್ಟಿದ್ದರು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನೀವು ಹೇಳಿದಂತೆ ಪ್ರತಿವಾದಿಗೆ ರೂ.5,00,000/– ಸಂದಾಯ ಮಾಡಿದ ಬಗ್ಗೆ ಏನಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ಆನಂತರ ರೂ. 8,00,000/– ಸಂದಾಯ ಮಾಡಿದ ಬಗ್ಗೆ ಏನಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಅಂತಾ ಉತ್ತರಿಸುತ್ತಾರೆ. ಆ ರೀತಿ ಪ್ರತಿವಾದಿಗೆ ರೂ.5,00,000/–ಹಾಗೂ 8,00,000/– ಸಂದಾಯ ಮಾಡಿದ್ದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಪ್ರತಿವಾದಿಗೆ ಕೊಟ್ಟಿದ್ದೀರಿ ಎನ್ನಲಾದ ಒಟ್ಟು ರೂ. 17,30,000/–ಹಣಕ್ಕೆ ಸಂಬಂಧಿಸಿದಂತೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ಪ್ರತಿವಾದಿಗೆ ಒಟ್ಟು ರೂ. 17,30,000/– ಸಂದಾಯ ಮಾಡಿರುತ್ತೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನೀವು ಆಧರಿಸುವ ನಿಪಿ–1ರ ಷರತ್ತುಗಳು ಅವಧಿ ಮೀರಿದೆ ಎಂದರೆ ಸರಿಯಲ್ಲ. ಆದ್ದರಿಂದ ನೀವು ಆ ಅವಧಿ ಮೀರಿದ ದಾಖಲೆಯನ್ನು ಆಧರಿಸಿ ಪ್ರತಿವಾದಿಯ ವಿರುದ್ಧ ಯಾವುದೇ ಕ್ಲೇಮು ಕೇಳಲು ಅರ್ಹರಲ್ಲ ಎಂದರೆ ಸರಿಯಲ್ಲ.

6. ಪ್ರತಿವಾದಿಯು ದಾವಾ ಆಸ್ತಿಗೆ ಸಂಬಂಧಿಸಿದಂತೆ ಬೇರೆ ಬೇರೆ ಕರಾರು ಪತ್ರಗಳನ್ನು, ಜಿ.ಪಿ.ಎ ವಗೈರೆ ದಾಖಲೆಗಳನ್ನು ಮಾಡಿಕೊಟ್ಟಿರುತ್ತಾರೆ ಹಾಗೂ ಋಣಭಾರ ಸೃಷ್ಟಿ ಮಾಡಿರುತ್ತಾರೆ ಎಂಬ ಬಗ್ಗೆ ಯಾವುದೇ ದಾಖಲೆಯನ್ನು ಈ ದಾವೆಯಲ್ಲಿ ನೀವು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನಾನು ಅವುಗಳನ್ನು ವಕೀಲರಿಗೆ ಕೊಟ್ಟಿದ್ದೆ ಆದರೆ ನ್ಯಾಯಾಲಯದ ಕಡತದಲ್ಲಿ ಕಂಡುಬರುವುದಿಲ್ಲ ಅಂತಾ ಉತ್ತರಿಸುತ್ತಾರೆ.

7. ಪ್ರತಿವಾದಿಯ ಕಡೆಯಿಂದ ಯಾವುದೇ ವಿಳಂಬ, ತಪ್ಪು ಮಾಡಿರುವುದಾಗಲೀ ಅಥವಾ ಕರಾರಿನ ಷರತ್ತನ್ನು ಉಲ್ಲಂಘಿಸಿರುವುದಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ.

8. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗೆ ಬಾಕಿ ಹಣ ರೂ. 21,70,000/- ಪಾವತಿ ಮಾಡಲು ತಯಾರಿದ್ದೇನೆ ಅಂತಾ ಹೇಳಿದ್ದು ಸದ್ರಿ ರೂ. 21,70,000/- ಅಂತಾ ಯಾವ ಲೆಕ್ಕಾಚಾರದಲ್ಲಿ ಹೇಳಿರುವುದು ಎಂದರೆ ಸಾಕ್ಷಿ ರೂ.17,30,000/-ಹಣವನ್ನು ನಾನು ಪ್ರತಿವಾದಿಗೆ ಪಾವತಿ ಮಾಡಿದ್ದು ಬಾಕಿ ಕೊಡಲು ರೂ.21,70,000/- ಇದೆ ಅಂತಾ ಹೇಳಿದ್ದೆ ಅಂತಾ ಉತ್ತರಿಸುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ಪ್ರತಿವಾದಿ ನನಗೆ ಸತಾಯಿಸಿದರು, ತೊಂದರೆ ಕೊಟ್ಟರು ಹಾಗೂ ಮನೆಯಿಂದ ಕಾನೂನು ಬಾಹಿರವಾಗಿ ಹೊರದಬ್ಬಿದ್ದರು ಅಂತಾ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

10. ನೀವು ದಾವಾ ಆಸ್ತಿಯಲ್ಲಿ ಸ್ವಾಧೀನ ಇದ್ರಿ ಅಂತಾ ಹೇಳುವ ಬಗ್ಗೆ ಸಹ ಯಾವುದೇ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ.

11. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯು ಅವರ ಸಂಗಡಿಗರೊಂದಿಗೆ ಹಾಗೂ ಪೋಲಿಸರ ಮುಖಾಂತರ ದಿನಾಂಕ 07-02-2025 ರಂದು ಪೋಲಿಸ್ ಠಾಣೆಯಲ್ಲಿ ಕರೆದುಕೊಂಡು ಹೋಗಿ ಕೆಲವು ಒತ್ತಡ ಹೇರಿ ಕರಾರಿನ ವೇಳೆ ನಿಮ್ಮ ಸಹಿ ಮಾಡಿಸಿಕೊಂಡರು ಅಂತಾ ಆಪಾದಿಸಿದ್ದು ಆ ರೀತಿ ಸಹಿ ಮಾಡಿಸಿಕೊಂಡಿದ್ದಾರೆ ಎನ್ನಲಾದ ಕರಾರನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆಗಳನ್ನು ನನ್ನ ವಕೀಲರಿಗೆ ಕೊಟ್ಟಿದ್ದೆ ಅಂತಾ ಉತ್ತರಿಸುತ್ತಾರೆ. ಆ ರೀತಿ ನಿಮ್ಮನ್ನು ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗಿ ನಿಮ್ಮ ಮೇಲೆ ಒತ್ತಡ ಹೇರಿ ಕಾನೂನು ಬಾಹಿರವಾಗಿ ಕರಾರಿನ ಮೇಲೆ ಸಹಿ ಪಡೆದುಕೊಂಡ ಬಗ್ಗೆ ನೀವೇನಾದರೂ ಪೋಲಿಸರ ಮೇಲಾಧಿಕಾರಿಯವರ ವಿರುದ್ಧವಾಗಲೀ ಅಥವಾ ಯಾವುದೇ ಪೋಲಿಸ್ ಠಾಣೆಯಲ್ಲಾಗಲೀ ಪ್ರತ್ಯೇಕ ದೂರನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ಆ ಎಲ್ಲಾ ಆಪಾದನೆಗಳು ಕಟ್ಟುಕತೆಯಾಗಿದ್ದು ನಾನು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

12. ಪ್ರತಿವಾದಿಯು ದಾವಾ ಆಸ್ತಿಯಲ್ಲಿರುವ ಮನೆಯಲ್ಲಿನ ಖಾಯಂ ನಿವಾಸಿ ಎಂದರೆ ಸರಿಯಲ್ಲ. ಅವರು ಅಲ್ಲಿನ ಖಾಯಂ ನಿವಾಸಿಯಾಗಿದ್ದರೂ ಸಹ ನಾನು ಅವರ ಸುಳ್ಳು ವಿಳಾಸವನ್ನು ತೋರಿಸಿ ದಾವೆಯನ್ನು ತಂದಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದಲೇ ದಾವೆಯ ಸಮನ್ಸು ಅವರಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ಶಿರಸಿಯ ನಿವಾಸಿ ಅಂತಾ ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ಕರಾರಿನಲ್ಲಿ ಶಿರಸಿಯ ವಿಳಾಸ ಇದೆ ಅಂತಾ ಉತ್ತರಿಸುತ್ತಾರೆ.

13. ಪ್ರತಿವಾದಿ ನಿವೃತ್ತ ಶಿಕ್ಷಕ ಎಂದರೆ ಸಾಕ್ಷಿ ಶಿಕ್ಷಕರು ಅಂತಾ ನನಗೆ ಹೇಳಿದ್ದರು ಅಂತಾ ಉತ್ತರಿಸುತ್ತಾರೆ. ನೀವು ಉದ್ದೇಶಪೂರ್ವಕವಾಗಿ ಪ್ರತಿವಾದಿಯನ್ನು ಈ ದಾವೆಯಲ್ಲಿ ವ್ಯಾಪಾರಸ್ದರು ಅಂತಾ ಬಿಂಬಿಸಿರುತ್ತೀರಿ ಎಂದರೆ ಸಾಕ್ಷಿ ಅವರು ವ್ಯಾಪಾರ ಮಾಡುತ್ತಾರೆ ಅಂತಾ ಉತ್ತರಿಸುತ್ತಾರೆ.

14. ಪ್ರತಿವಾದಿಯು ನಿಪಿ-1ರ ಕರಾರಿನ ಪ್ರಕಾರ ಅವರು ಪಡೆದುಕೊಂಡ ಮುಂಗಡ ಹಣದ ಶೇಕಡಾ 50 ರಷ್ಟನ್ನು ನಿಮಗೆ ವಾಪಾಸು ಕೊಡಲು ಬಂದರು ಸಹ ನೀವು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ . ಪ್ರತಿವಾದಿ ಆ ಹಣವನ್ನು ನಿಮಗೆ ಕೊಡಲು ಯಾವಾಗಲೂ ಸಿದ್ದರಿದ್ದಾರೆ ಎಂದರೆ ಸರಿಯಲ್ಲ.

15. ನೀವು ನಿಪಿ-1ರ ಕರಾರಿನ ಅವದಿಧ ಮುಗಿದ ಕೂಡಲೇ 1 ತಿಂಗಳ ಕಾಲಾವಕಾಶವನ್ನು ವಿಸ್ತರಿಸಿ ಕಾಲಾವಕಾಶ ಕೇಳಿಕೊಂಡು ಒಂದು ದಾಖಲೆಯನ್ನು ಮಾಡಿಕೊಂಡು ಅದನ್ನು ನಿಮ್ಮ ಬಳಿಯೇ ಇಟ್ಟುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಷದ್ರಿ ದಾಖಲೆಯಲ್ಲಿ ನಿಪಿ-1ರ ಕರಾರಿನ ಪ್ರಕಾರ ಕ್ರಯಪತ್ರವನ್ನು ಮಾಡಿಸಿಕೊಳ್ಳಲು ನಿಮಗೆ ಆಗಿರುವ ತೊಂದರೆಯ ಬಗ್ಗೆ ಉಲ್ಲೇಖಿಸಲಾಗಿತ್ತು ಎಂದರೆ ಸರಿಯಲ್ಲ.

16. ನಿಮ್ಮ ಈ ದಾವೆಯು ಅನೂರ್ಜಿತ ಕ್ರಯದ ಕರಾರು ಪತ್ರದ ಮೇಲೆ ಆಧರಿಸಿರುವ ಕಾರಣ ಈ ದಾವೆಯಲ್ಲಿ ಕೇಳಿದ ಯಾವುದೇ ಪರಿಹಾರವನ್ನು ಕೇಳಲು ನೀವು ಅರ್ಹರಲ್ಲ ಎಂದರೆ ಸರಿಯಲ್ಲ. ಈ ದಾವೆಗೆ ಅನೂಕೂಲವಾಗುವಂತೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಕಾರವಾರ.**